**ಅರುಣಾ ಸಹಕಾರ ಬ್ಯಾಂಕ್ ನಿಯಮಿತ,**

**ನಂ.708, 15ನೇ ಎ ಮುಖ್ಯರಸ್ತೆ, ಎಲ್.ಐ.ಸಿ. ಕಛೇರಿ ಹತ್ತಿರ, ಎ ಸೆಕ್ಟರ್, ಯಲಹಂಕ ಉಪನಗರ,**

**ಬೆಂಗಳೂರು–560 064.**

ಮಾನ್ಯ ಸದಸ್ಯರೇ,

ದಿನಾಂಕ : **24–09–2026 ರಂದು ಗುರುವಾರ ಬೆಳಗ್ಗೆ 10–30** ಘಂಟೆಗೆ ಸರಿಯಾಗಿ 2025–26ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಬ್ಯಾಂಕಿನ **ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಎಸ್.ಎಲ್.ನಟರಾಜ ರವರ** ಉಪಸ್ಥಿತಿಯಲ್ಲಿ ಕರೆಯಲಾಗಿದೆ ತಾವುಗಳು ಸಕಾಲಕ್ಕೆ ಆಗಮಿಸಬೇಕಾಗಿ ವಿನಂತಿ. ಸರ್ವ ಸದಸ್ಯರ ಸಭೆ ನಡೆಯುವ ಸ್ಥಳಃ–

**ಡಾ|| ಬಿ.ಆರ್. ಅಂಬೇಡ್ಕರ್ ಭವನ,**

ಶ್ರೀನಿವಾಸ ದೇವಸ್ಥಾನ ಪಕ್ಕ, ಎನ್.ಇ.ಎಸ್. ಬಸ್ ಸ್ಟಾಪ್ ಹತ್ತಿರ, 2ನೇ 'ಎ' ಅಡ್ಡ ರಸ್ತೆ, 'ಎ' ಸೆಕ್ಟರ್, ಯಲಹಂಕ ಉಪನಗರ, ಬೆಂಗಳೂರು – 560 064.

**ಕಾರ್ಯಸೂಚಿಃ–**

1. ಪ್ರಾರ್ಥನೆ
2. ಸ್ವಾಗತ ಭಾಷಣ
3. ಜ್ಯೋತಿ ಬೆಳಗುವುದು
4. ಮರಣ ಹೊಂದಿದ ಸದಸ್ಯರುಗಳ ಗೌರವಾರ್ಥ ಸಂತಾಪ ಸೂಚನೆ.
5. 2025–26ರ ಸರ್ವಸದಸ್ಯರ ಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ದಾಖಲಿಸುವುದು.
6. ದಿನಾಂಕ 25–09–2025 ರಂದು ನಡೆದ ಸರ್ವ ಸದಸ್ಯರ ಸಭೆಯ ನಡವಳಿಕೆಗಳನ್ನು ಓದಿ ದಾಖಲಿಸುವುದು.
7. ಬ್ಯಾಂಕಿನ 2025–26ನೇ ಸಾಲಿನ ವಾರ್ಷಿಕ ವರದಿಯ ಮಂಡಣೆ ಮತ್ತು ಅಂಗೀಕಾರ.
8. ಆಡಿಟರಿಂದ ಪರಿಶೋಧಿಸಲ್ಪಟ್ಟ ಬ್ಯಾಂಕಿನ 2025–2026 ನೇ ಸಾಲಿನ ಲೆಕ್ಕ ಪರಿಶೀಲನಾವರದಿ. ಜಮಾ– ಖರ್ಚು, ಲಾಭ–ನಷ್ಟ ಮತ್ತು ಆಸ್ತಿ–ಜವಾಬ್ದಾರಿ ತಃಖ್ತೆಗಳನ್ನು ಹಾಗೂ ಅನುಪಾಲನಾ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು.
9. 2026–27ನೇ ಸಾಲಿನ ಆಯ–ವ್ಯಯ (ಬಡ್ಜೆಟ್) ಮಂಜೂರಾತಿ.
10. 2026–27ನೇ ಸಾಲಿನ ಲೆಕ್ಕ ಪರಿಶೋಧಕರನ್ನು ನೇಮಿಸುವ ಬಗ್ಗೆ ಮತ್ತು ಅವರ ಸಂಭಾವನೆ ನಿಗದಿ ಪಡಿಸುವ ಬಗ್ಗೆ.
11. 2025–26ನೇ ಸಾಲಿನ ಲಾಭ ವಿಲೇವಾರಿ ಬಗ್ಗೆ.
12. 2025–26ನೇ ಸಾಲಿನ ಸದಸ್ಯರುಗಳನ್ನು ಸೇರಿಸಿಕೊಂಡ ಮತ್ತು ಹಿಂತೆಗೆದುಕೊಂಡ ಬಗೆಗಿನ ಟಿಪ್ಪಣಿ ಪರಿಶೀಲನೆ.
13. 2025–26ನೇ ಸಾಲಿನಲ್ಲಿ ನಿರ್ದೇಶಕರ ಸಂಬಂಧಿಗಳಿಗೆ ನೀಡಲಾದ ಸಾಲಗಳ/ಮುಂಗಡಗಳು ಸುಸ್ತಿದಾರರು ಯಾವುದಾದರು ಇದ್ದರೆ ಅವುಗಳ ಪರಿಶೀಲನೆ.
14. ವಸೂಲಿಯಾಗದವುದೆಂದು ಪರಿಗಣಿಸಲಾದ ವಸೂಲಾಗದ ಸಾಲಗಳು ಇದ್ದಲ್ಲಿ ಇದರ ಬಗ್ಗೆ ತಿರ್ಮಾನ.
15. ಸಮಿತಿಯ ನಿರ್ದೇಶಕರುಗಳ ಅಥವಾ ಮುಖ್ಯಕಾರ್ಯನಿರ್ವಾಹಕರ ಸಂಬಂಧಿಗಳೇನಾದರೂ ಬ್ಯಾಂಕಿನಲ್ಲಿ ನೇಮಕವಾಗಿದ್ದರೆ ಆ ನೌಕರರ ಪಟ್ಟಿಯನ್ನು ಪರಿಶೀಲಿಸುವುದು.
16. ಸದಸ್ಯರಿಂದ ಬಂದ ಸಲಹೆ ಸೂಚನೆಗಳ ಪರೀಶೀಲನೆ.
17. ಅಧ್ಯಕ್ಷರ ಭಾಷಣ.
18. ಪ್ರತಿಭಾ ಪುರಸ್ಕಾರ
19. ವಂದನಾರ್ಪಣೆ.

**ಆಡಳಿತ ಮಂಡಳಿ ಅಪ್ಪಣೆ ಮೇರೆಗೆ**

**ಸಹಿ/–**

**(ವೈ.ಎನ್. ಅಶ್ವಥನಾರಾಯಣ)**

# <u>ವಿಶೇಷ ಸೂಚನೆ</u>

## ಸೂಚನೆಗಳು

1. ಸರ್ವಸದಸ್ಯರ ಸಭೆಯಲ್ಲಿ ಚರ್ಚೆಗಾಗಿ ವಿಷಯಗಳೇನಾದರೂ ಇದ್ದಲ್ಲಿ ಅಂತಹ ವಿಷಯಗಳನ್ನು ವಾರ್ಷಿಕ ಸಭೆಯ 5 ದಿನಗಳ ಮುಂಚಿತವಾಗಿ ವ್ಯವಸ್ಥಾಪಕರಿಗೆ ಲಿಖಿತ ಮೂಲಕ ತಲುಪಿಸಬೇಕಾಗಿ ವಿನಂತಿ.
2. ವಾರ್ಷಿಕ ವರದಿ ಪುಸ್ತಕಗಳನ್ನು ದಿನಾಂಕ 19–09–2026 ರಿಂದ ಬ್ಯಾಂಕಿನಲ್ಲಿ ಪಡೆಯಬಹುದು.
3. ಹಾಜರಾದ ಎಲ್ಲಾ ಸದಸ್ಯರುಗಳು ತಪ್ಪದೆ ಹಾಜರಿ ಪುಸ್ತಕದಲ್ಲಿ ಸಹಿ ಮಾಡಬೇಕಾಗಿ ಪ್ರಾರ್ಥನೆ.
4. ಸದಸ್ಯರ ತಮ್ಮ ವಿಳಾಸ ಬದಲಾವಣೆ ಇದ್ದಲ್ಲಿ ಬ್ಯಾಂಕಿಗೆ ತಕ್ಷಣ ತಿಳಿಸಬೇಕಾಗಿ ವಿನಂತಿ ಮತ್ತು ಕೆ.ವೈ.ಸಿ. (KYC) ಮಾಹಿತಿಯೊಂದಿಗೆ ಬ್ಯಾಂಕಿಗೆ ತಲುಪಿಸುವುದು.
5. ಬ್ಯಾಂಕಿನ ವಾರ್ಷಿಕ ಸಾಮಾನ್ಯ ಸಭೆಯ ಎಲ್ಲಾ ಮಾಹಿತಿಗಳನ್ನು ಬ್ಯಾಂಕಿನ ಅಧಿಕೃತ ವೆಬ್ ಸೈಟ್ www.arunabank.com ನಲ್ಲಿ ಲಭ್ಯವಿರುತ್ತದೆ. ಮಾನ್ಯ ಸದಸ್ಯರು ಈ ವೆಬ್ ಸೈಟ್ ಮೂಲಕ ಮಾಹಿತಿ ಪಡೆಯಬಹುದು.
6. ಸದಸ್ಯರುಗಳಿಗೆ ಭೋಜನ ವ್ಯವಸ್ಥೆ ಮಾಡಲಾಗಿದೆ.
7. ಪ್ರತಿಭಾ ಪುರಸ್ಕಾರಃ–

   2025–26 ನೇ ಸಾಲಿನಲ್ಲಿ ಬ್ಯಾಂಕಿನ ಸದಸ್ಯರುಗಳ ಮಕ್ಕಳಿಗೆ 10ನೇ ತರಗತಿಯಲ್ಲಿ ಶೇಕಾಡವಾರು **90** ಹೆಚ್ಚಿನ ಅಂಕ ಪಡೆದವರು, PUC ಯಲ್ಲಿ ಶೇಕಾಡವಾರು **85** ಕ್ಕೂ ಹೆಚ್ಚಿನ ಅಂಕ ಪಡೆದವರು ಮತ್ತು B.A., B.Com. Bsc. ಶೇಕಾಡವಾರು **85** ,Engineering ಪದವಿಯಲ್ಲಿ ಶೇಕಾಡವಾರು **85** ಕ್ಕೂ ಹೆಚ್ಚಿನ ಅಂಕ ಪಡೆದವರುಗಳಿಗೆ ತಲಾ **ರೂ.1000/–** ಹಾಗೂ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಗುವುದು, ಅಂತಹ ಪ್ರತಿಭಾನ್ವಿತರು ತಮ್ಮ ವಿವರಗಳೊಂದಿಗೆ ಬ್ಯಾಂಕಿನ ವ್ಯವಸ್ಥಾಪಕರಿಗೆ ದಿನಾಂಕಃ 19–09–2026ರ ಒಳಗೆ ಸಲ್ಲಿಸಬೇಕಾಗಿ ಕೋರಿದೆ.